ಈ ವಿಕೃತ ಮನೋಭಾವದವರನ್ನು ಸಹ ನೀವು ಅರೆಸ್ಟ್ ಮಾಡಿ ಅವರಲ್ಲಿ ಭಯ ಭೀತಿಯನ್ನು ಹುಟ್ಟಿಸಬೇಕು. ಗೂಂಡಾ ಕಾಯಿದೆ ಅಡಿ ತೆಗೆದುಕೊಂಡು ಅವರನ್ನು ಒಳಗೆ ಹಾಕಬೇಕು. ರೌಡಿಗಳ ಟೀಮ್ ಏನಿದೆ, ಅವರ ಶಿಷ್ಯರೇನಿದ್ದಾರೆ, ಅವರ ಕಡೆಗೂ ಹೆಚ್ಚಿನ ಗಮನಹರಿಸಿ, ಬೆಂಗಳೂರು ಮತ್ತು ಇಡೀ ರಾಜ್ಯಕ್ಕೆ ನಮ್ಮ ಸರ್ಕಾರ ಹೊಸ ಸಂದೇಶವನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:– ಕೃಷ್ಣಪ್ಪ ಅವರೇ ಒಂದು ನಿಮಿಷ, ತಮಗೆ ಕಾಲಾವಕಾಶ ಕೊಡುತ್ತೇನೆ. ಒಂದು ಸಣ್ಣ ಪ್ರಕಟಣೆಯಿದೆ.

ಪ್ರಕಟಣೆ

ಮಾನ್ಯ ಲೋಕೋಪಯೋಗಿ ಸಚಿವರಾದ ಡಾ॥ ಹೆಚ್.ಸಿ. ಮಹದೇವಪ್ಪ ನವರು ಈ ದಿನ ಮಧ್ಯಾಹ್ನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾನ್ಯ ಸದಸ್ಯರುಗಳ ಗೌರವಾರ್ಥ ಭೋಜನ ಕೂಟವನ್ನು ಏರ್ಪಡಿಸಿರುತ್ತಾರೆ. ತಾವೆಲ್ಲರೂ ಭೋಜನಕೂಟದಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

ಶ್ರೀ ಅರವಿಂದ್ ಚಂದ್ರಕಾಂತ ಬೆಲ್ಲದ್ (ಹುಬ್ಬಳ್ಳಿ–ಧಾರವಾಡ (ಕೇಂದ್ರ)):– ಮಾನ್ಯ ಉಪಾಧ್ಯಕ್ಷರೆ, ಇವತ್ತು ಬಲಾತ್ಕಾರದ ಬಗ್ಗೆ ಮಾತನಾಡಬೇಕಾದರೆ, ವಿಕೃತ ಕಾಮಿಗಳು ಮತ್ತು ಗೂಂಡಾಗಳ ಬಗ್ಗೆ ಮಾತನಾಡುತ್ತಿದ್ದೇವೆ. ವಿಕೃತ ಕಾಮಿಗಳದ್ದು ಒಂದು ವಿಷಯವೆಂದರೆ, ಈ ಗೂಂಡಾಗಳು ಏತಕ್ಕಾಗಿ ಈ ರೀತಿಯ ಧೈರ್ಯ ಮಾಡುತ್ತಾರೆ ಎನ್ನುವುದರ ಬಗ್ಗೆ ಈ ಸಂದರ್ಭದಲ್ಲಿ ವಿಚಾರ ಮಾಡುವುದು ಸೂಕ್ತವಾಗಿದೆ. ಈ ಗೂಂಡಾಗಳು ಹುಟ್ಟುವುದು ಎಲ್ಲಿ ಎಂದರೆ ಪೊಲೀಸ್ ಸ್ಟೇಷನ್ ಸುತ್ತಮುತ್ತ ಹುಟ್ಟುತ್ತಾರೆ. ಇವತ್ತಿನ ದಿವಸ ಒಬ್ಬ ಸಜ್ಜನ ವ್ಯಕ್ತಿ ಪೊಲೀಸ್ ಸ್ಟೇಷನ್‌ಗೆ ಹೋಗಿ complaint ಕೊಡುವಂಥ ಪರಿಸ್ಥಿತಿ ಇಲ್ಲ. ಮೊದಲ ಬಾರಿಗೆ ಎಂ.ಎಲ್.ಎ. ಆದ ನಾವು ಹೇಳಿದರೂ ಸಹ ಪೊಲೀಸ್ ಸ್ಟೇಷನ್‌ನಲ್ಲಿ ಕೇಸ್